## ನಿಮ್ಮೊಡನೆ

# ಸರ್ಕಾರಿ ಶಾಲೆಗಳ ಸಬಲೀಕರಣ ಮಾತಿನ ಕಾಳಜಿ ಸಾಕು, ಇಚ್ಛಾಶಕ್ತಿ ಬೇಕು

ಮಕ್ಕಳು ಏನನ್ನು ಧರಿಸಬೇಕು ಧರಿಸಬಾರದು ಹಾಗೂ ಏನನ್ನು ಓದಬೇಕು ಯಾವುದು ಬೇಡ ಎನ್ನುವುದಕ್ಕೆ ಜನಪ್ರತಿನಿಧಿಗಳಿಂದ ವ್ಯಕ್ತವಾಗುವ ಉತ್ಸಾಹ, ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೆ ದೊರೆಯದಿರುವುದು ವಿಷಾದದ ಸಂಗತಿ.



ಈಶ್ವರ್

ಗುಣಮಟ್ಟದ ಕೊರತೆಯಿಂದಾಗಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಆತ್ಮವಿಮರ್ಶೆಯ ಧಾಟಿಯಲ್ಲಿ ಮಾತನಾಡಿದ್ದಾರೆ. ಅವರ ಮಾತಿನ ಬೆನ್ನಿಗೇ, 2023–2024ರ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆ ಸುಮಾರು ಎರಡೂವರೆ ಲಕ್ಷದಷ್ಟು ಕಡಿಮೆಯಾಗಿರುವ ಕುರಿತ ವರದಿಗಳು ಪ್ರಕಟಗೊಂಡಿವೆ.

ಕಳೆದ ಶೈಕ್ಷಣಿಕ ವರ್ಷದಲ್ಲಿ 45,45,432 ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ನೋಂದಣಿಯಾಗಿದ್ದರೆ, ಆ ಪ್ರಮಾಣ ಪ್ರಸಕ್ತ ವರ್ಷ 42,90,948ಕ್ಕೆ ಇಳಿದಿದೆ. ಇದೇ ಅವಧಿಯಲ್ಲಿ 45,13,902ರಿಂದ 46,43,225ಕ್ಕೆ ಖಾಸಗಿ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆ ಏರಿದೆ. ಈ ಏರಿಕೆ ಪ್ರಮಾಣ, ಪೋಷಕರು ಮತ್ತು ಮಕ್ಕಳು ಖಾಸಗಿ ಶಾಲೆಗಳ ಬಗೆಗೆ ಹೆಚ್ಚು ಒಲವು ಹೊಂದಿರುವುದನ್ನು ಸೂಚಿಸುತ್ತಿದೆ. ಈ ಒಲವಿಗೆ, ಸಚಿವರು ಅಭಿಪ್ರಾಯಪಟ್ಟಿರುವಂತೆ ಸರ್ಕಾರಿ ಶಾಲೆಗಳಲ್ಲಿನ ಗುಣಮಟ್ಟದ ಕೊರತೆಯೇ ಕಾರಣವೇ? ವಿಷಯ ಅಷ್ಟು ಸರಳವಾಗಿದ್ದಿರಲಾರದು.

ಶಿಕ್ಷಣದ ಗುಣಮಟ್ಟದ ಕೊರತೆ ಎಂದರೆ ಏನು? ಗುಣಮಟ್ಟದ ಶಿಕ್ಷಕರ ಕೊರತೆಯೆನ್ನುವುದು ಸಚಿವರ ಮಾತಿನ ಇಂಗಿತವೆ? ಹಾಗಿರಲಾರದು. ಸರ್ಕಾರಿ ಶಾಲೆಗಳ ಶಿಕ್ಷಕರ ನೇಮಕಾತಿ, ಅಭ್ಯರ್ಥಿಗಳ ಮೆರಿಟ್ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನಡೆಯುತ್ತದೆ. ಹಾಗಾಗಿ, ಜೊಳ್ಳು ಅಭ್ಯರ್ಥಿಗಳು ಶಿಕ್ಷಕರಾಗಿ ಆಯ್ಕೆಯಾಗಲಿಕ್ಕೆ ಸಾಧ್ಯವಿಲ್ಲ. ಗುಣಮಟ್ಟಕ್ಕೆ ಸಂಬಂಧಿಸಿದ ಎರಡನೇ ಸಂಗತಿ, ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ್ದು. 2023ರ ಆಗಸ್ಟ್ ವೇಳೆಗೆ ಎಲ್ಲ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶೌಚಾಲಯ ನಿರ್ಮಿಸಿಕೊಡುವುದಾಗಿ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಕಲಿತ ಶಾಲೆಗಳೊಂದಿಗೆ, ಶತಮಾನ ಪೂರೈಸಿರುವ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವುದಾಗಿ ಕಳೆದ ನವೆಂಬರ್‌ನಲ್ಲಿ ನಿಕಟಪೂರ್ವ ಸರ್ಕಾರ ಹೇಳಿತ್ತು. ರಾಜ್ಯದ ಎಲ್ಲ ಶಾಲೆಗಳಲ್ಲಿ ಶೌಚಾಲಯಗಳನ್ನು ಕಡ್ಡಾಯವಾಗಿ ನಿರ್ಮಿಸಲಾಗುವುದು ಎಂದು 2019ರಲ್ಲೂ ಸರ್ಕಾರ ಹೇಳಿತ್ತು. ಅದಾದ ನಂತರವೂ ಸಾವಿರಾರು ಸರ್ಕಾರಿ ಶಾಲೆಗಳು ಕುಡಿಯುವ ನೀರು ಮತ್ತು ಶೌಚಾಲಯಗಳಿಂದ ವಂಚಿತವಾಗಿವೆ. ಮೂಲಭೂತ ಸೌಕರ್ಯಗಳನ್ನು ಸರಿಪಡಿಸುವಲ್ಲಿ ವಿಫಲವಾಗಿರುವ ಸರ್ಕಾರ, ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಕಾರಣ ನೀಡಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದೆ. ಇನ್ನೊಂದೆಡೆ ಖಾಸಗಿ ಶಾಲೆಗಳ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಲೇ ಇದೆ. ಹೀಗೆ, ಸರ್ಕಾರಿ ಶಾಲೆಗಳನ್ನು ಮುಚ್ಚುವುದರಿಂದ ಹೆಚ್ಚಿನ ತೊಂದರೆ ಅನುಭವಿಸುವುದು ಗ್ರಾಮೀಣ ಭಾಗಗಳ ಬಡ ಸಮುದಾಯದ ಮಕ್ಕಳು. ಶಿಕ್ಷಣ ಕ್ಷೇತ್ರದಲ್ಲಿ ಅಸಮಾನತೆಯನ್ನು ಕಡಿಮೆಗೊಳಿಸುವಲ್ಲಿ ಸರ್ಕಾರಿ ಶಾಲೆಗಳ ಪಾತ್ರ ದೊಡ್ಡದಿದೆ ಹಾಗೂ ಸರ್ಕಾರಿ ಶಾಲೆಗಳನ್ನು ಉಳಿಸುವ ಪ್ರಯತ್ನ ‘ಕನ್ನಡ ಮಾಧ್ಯಮ’ ಹಾಗೂ ಕನ್ನಡ ನುಡಿಯನ್ನು ಉಳಿಸುವ ಮಾರ್ಗವೂ ಹೌದು ಎನ್ನುವುದನ್ನು ಸರ್ಕಾರಗಳು ಮರೆತಂತಿದೆ.

ಸರ್ಕಾರಿ ಶಾಲೆಗಳ ಬಗ್ಗೆ ಸರ್ಕಾರ ಆಗಾಗ ಕಾಳಜಿ ವ್ಯಕ್ತಪಡಿಸುತ್ತಿರುತ್ತದೆ. ನವೆಂಬರ್ ಸಮಯದಲ್ಲಂತೂ ಕನ್ನಡ ಶಾಲೆಗಳು ಭಾವುಕ ಸಂಗತಿಯಾಗಿ ಚರ್ಚೆಗೆ ಒದಗಿಬರುತ್ತವೆ. ಆದರೆ, ಈ ಕಾಳಜಿ ಮಾತುಗಳಲ್ಲೇ ಉಳಿದಿರುವುದು ಸರ್ಕಾರಿ ಶಾಲೆಗಳ ದುಸ್ಥಿತಿಗೆ ಕಾರಣವಾಗಿದೆ. ಸರ್ಕಾರಿ ಶಾಲೆಗಳ ಸಬಲೀಕರಣ ಈವರೆಗಿನ ಯಾವ ಸರ್ಕಾರಕ್ಕೂ ಆದ್ಯತೆಯ ವಿಷಯವಾಗಿಲ್ಲ. ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಸಕಾಲಕ್ಕೆ ಒದಗಿಸುವುದೂ ಸಾಧ್ಯವಾಗಿಲ್ಲ. ಮಕ್ಕಳು ಏನನ್ನು ಧರಿಸಬೇಕು ಧರಿಸಬಾರದು ಹಾಗೂ ಏನನ್ನು ಓದಬೇಕು ಯಾವುದು ಬೇಡ ಎನ್ನುವುದಕ್ಕೆ ಜನಪ್ರತಿನಿಧಿಗಳಿಂದ ವ್ಯಕ್ತವಾಗುವ ಉತ್ಸಾಹ, ಶಾಲೆಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕೆ ದೊರೆಯದಿರುವುದು ವಿಷಾದದ ಸಂಗತಿ.

ಸರ್ಕಾರಿ ಶಾಲೆಗಳು ದುರ್ಬಲಗೊಂಡಿರುವ ಬಗ್ಗೆ ಶಿಕ್ಷಣ ಸಚಿವರು ವ್ಯಕ್ತಪಡಿಸಿರುವ ಆತಂಕ, ಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬಲಪಡಿಸುವ ನಿಟ್ಟಿನಲ್ಲಿನ ಆತ್ಮಾವಲೋಕನದ ನಡೆಯಾಗಿ ಬದಲಾದರೆ ಒಳ್ಳೆಯದು. 13,352 ಶಿಕ್ಷಕರ ನೇಮಕಾತಿಗಿದ್ದ ಕಾನೂನು ತೊಡಕನ್ನು ಹೈಕೋರ್ಟ್ ತೆರವುಗೊಳಿಸಿರುವುದು, ಮೇಷ್ಟ್ರುಗಳ ಕೊರತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸರ್ಕಾರಕ್ಕೆ ಅನುಕೂಲಕರವಾಗಿದೆ. ಗುಣಮಟ್ಟದ ಶಿಕ್ಷಣದ ಕೊರತೆಯ ಬಗ್ಗೆ ಮಾತನಾಡಿರುವ ಸಚಿವರು, ಉತ್ತಮ ಶಿಕ್ಷಣ ದೊರೆಯದಿರುವುದಕ್ಕೆ ಕಾರಣಗಳನ್ನೂ ಯೋಚಿಸಬೇಕು. ಶಿಕ್ಷಕರ ಮೇಲಿನ ಪಠ್ಯೇತರ ಹೊರೆಯನ್ನು ಇಳಿಸದ ಹೊರತು, ಸರ್ಕಾರಿ ಶಾಲೆಗಳು ಉತ್ತಮಗೊಳ್ಳುವುದು ಸಾಧ್ಯವಿಲ್ಲ. ಲಭ್ಯವಿರುವ ಶಿಕ್ಷಕರ ಸಂಪೂರ್ಣ ಸಮಯ ಹಾಗೂ ಸಾಮರ್ಥ್ಯ ವಿದ್ಯಾರ್ಥಿಗಳಿಗೆ ದೊರೆಯುವಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಒಂದು ಕಾಲನ್ನು ಶಾಲೆಯಲ್ಲೂ ಇನ್ನೊಂದು ಕಾಲನ್ನು ಸರ್ಕಾರಿ ಕಾರ್ಯಕ್ರಮಗಳಲ್ಲೂ ಇಡುವ ಸ್ಥಿತಿಯನ್ನು ಶಿಕ್ಷಕರಿಗೆ ಸೃಷ್ಟಿಸಿದರೆ, ಅವರಿಂದ ಏನನ್ನು ತಾನೆ ನಿರೀಕ್ಷಿಸಲು ಸಾಧ್ಯ?

■ ರಘುನಾಥ ಚ.ಹ.